ದಿನಾಂಕಃ 23-07-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎನ್ ಎಸ್ ಜಿ ವಕೀಲರಿಂದಃ
1 ಮತ್ತು 11 ರಿಂದ 14 ರವರ ಪರವಾಗಿಃ

ನಾವು 11 ನೇ ಪ್ರತಿವಾದಿಯ ವಿರುದ್ಧ ಆತ ಮೋಸ ಮಾಡಿ ಬಕ್ಸಿಸು ಪತ್ರ ಮಾಡಿಕೊಂಡಿದ್ದರ ವಿರುದ್ಧ ಪೊಲೀಸ್ ಪಿರ್ಯಾದಿ ನೀಡಿಲ್ಲ. ಮೊದಲನೆ ಪ್ರತಿವಾದಿ ಮಾಡಿಕೊಟ್ಟಂತಹ ಸದರಿ ಬಕ್ಸಿಸು ಪತ್ರದ ಆಸ್ತಿಗೆ ಸಂಬಂಧಪಟ್ಟಂತೆ ವಾದಿಗೆ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಮ ನಂ.6 ಮತ್ತು 7 ಮೊದಲನೆ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದರೂ ಅದು ಕೂಡಿಕೆಯ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾನ ಪತ್ರದ ಆದಾದರೆ ಮೇಲೆ 11 ನೇ ಪ್ರತಿವಾದಿ ದಾವಾ ಐಟಮ ನಂ.6 ಮತ್ತು 7 ನೇ ಆಸ್ತಿಗಳು ಕಬ್ಜೆಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಮೊದಲನೆ ಪ್ರತಿವಾದಿಗೆ ಸದರಿ ದಾನ ಪತ್ರ ಮಾಡಿಕೊಟ್ಟ ವಿಷಯವೇ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಮೊದಲನೆ ಪ್ರತಿವಾದಿಗೆ ಸ್ವ ಇಚ್ಚೆಯಿಂದ ಸದರಿ ದಾನ ಪತ್ರ ಮಾಡಿಕೊಟ್ಟಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಎಲ್ಲ ಸಹೋದರರು ನಮ್ಮ ನಮ್ಮ ವ್ಯವಹಾರಗಳನ್ನು ಬೇರೆ ಬೇರೆ ಮಾಡುತ್ತೇವೆ ಎಂದರೆ ಸಾಕ್ಷಿ ಲೆಕ್ಕ ಪತ್ರಗಳ ಉದ್ದೇಶಕ್ಕಾಗಿ ಮಾತ್ರ ಹಾಗೆ ಮಾಡಿದ್ದೇವೆಂದು ನುಡಿದಿರುತ್ತಾರೆ. ನಮ್ಮ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ನಾವು ಆದಾಯ ತೆರಿಗೆ ತುಂಬುತ್ತೇವೆ ಎಂದರೆ ಸರಿ. ನಾನು ಆದಾಯ ತೆರಿಗೆ ರಿಟರ್ನ್ಸ್‌ನ್ನು ವೈಯಕ್ತಿಕವಾಗಿ ತುಂಬುತ್ತೇವೆ. ನಾವೆಲ್ಲರೂ ಬೇರೆ ಬೇರೆ ವ್ಯವಹಾರಗಳು ಮಾಡಿಕೊಂಡಿರುವುದರಿಂದ 2004 ರಲ್ಲಿ ಕುಟುಂಬ ವ್ಯವಸ್ಥಾ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಕುಟುಂಬದ ವ್ಯವಸ್ಥಾ ಪತ್ರದಲ್ಲಿ ದಾವಾ ಐಟಮ ನಂ.6 ಮತ್ತು 7 ಕ್ಕೆ ಸಂಬಂಧಟ್ಟಂತೆ ನಾವು ಎಲ್ಲರೂ ಸದರಿ ಆಸ್ತಿಗಳು 11 ನೇ ಪ್ರತಿವಾದಿಗೆ ಮಾತ್ರ ಸಂಬಂದಿಸಿದ್ದು ಎಂದು ಒಪ್ಪಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2015 ರಲ್ಲಿ ರಸ್ತೆ ಅಗಲೀಕರಣ ಪಾರಂಭವಾಯಿತು ಎಂದರೆ ಸರಿ. ಸದರಿ ರಸ್ತೆ ಅಗಲೀಕರಣದಲ್ಲಿ ಪ್ರಶಾಂತ ಲಾಡ್ಜ ಜಾಗೆಯ ಅರ್ಧ ಬಾಗ ಹೋಗಿದೆ ಎಂದರೆ ಸಾಕ್ಷಿ ಸ್ವಲ್ಪ ಪ್ರಮಾಣ ಹೋಗಿದೆ ಎಂದು ನುಡಿದಿರುತ್ತಾರೆ.

11 ನೇ ಪ್ರತಿವಾದಿ ಪ್ರಶಾಂತ ಲಾಡ್ಜ ನವೀಕರಣಕ್ಕೆ ತನ್ನ ವೈಯಕ್ತಿಕ ನಲೆಯಲ್ಲಿ ಪರವಾನಿಗೆ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಅದು ನಮಗೆ ಗೊತ್ತಾಗದ ಹಾಗೆ ಸಲ್ಲಿಸಿದ್ದಾನೆಂದು ನುಡಿದಿರುತ್ತಾರೆ. ಸದರಿ ದುರಸ್ತಿ ಕೆಲಸ ನಡೆದ ವಿಷಯ ನನಗೆ ಗೊತ್ತಿದೆ ಎಂದರೆ ಸರಿ. ಸದರಿ ಪರವಾನಿಗೆ ನಾವು ಯಾರೂ ನಮ್ಮ ತಕರಾರನ್ನ ಸಲ್ಲಿಸಿಲ್ಲ. ಸದರಿ ಆಸ್ತಿ 11 ನೇ ಪ್ರತಿವಾದಿಯ ಆಸ್ತಿಯಾಗಿದ್ದರಿಂದ ನಾವು ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಸದರಿ ಆಸ್ತಿ ದುರಸ್ತಿ ಗೊಳಿಸಲು ಎಸ್ ಬಿ ಐ ಗೋಕಾಕ ಶಾಖೆ 1 ವರೆ ಕೋಟಿ ಸಾಲವನ್ನು ತೆಗೆದಿದ್ದಾರೆ ಎಂದರೆ ಸಾಕ್ಷಿ ಅದನ್ನು ಅಭಿವೃದ್ದಿಗಾಗಿ ಪಡೆದಿದ್ದರೂ ಎಂದು ನುಡಿದಿರುತ್ತಾರೆ. 11 ನೇ ಪ್ರತಿವಾದಿ ಗೋಕಾಕ ಅರ್ಬನ ಬ್ಯಾಂಕ ಮತ್ತು ಸಯೋಗ ಚಿಟ್ಸ ಗೋಕಾಕ ಇವರಿಂದ ಸದರಿ ಆಸ್ತಿಯನ್ನು ಅಭಿವೃದ್ದಿ ಪಡಿಸಲು ತಲಾ 40 ಮತ್ತು 60 ಲಕ್ಷ ರೂ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಸದರಿ ವ್ಯವಹಾರ ಅಭಿವೃದ್ದಿ ಪಡಿಸಲು ತೆಗೆದಿದ್ದರು ಎಂದು ನುಡಿದಿರುತ್ತಾರೆ. ಸದರಿ ಸಾಲದ ಹಣವನ್ನು 11 ನೇ ಪ್ರತಿವಾದಿ ಕಟ್ಟಡ ಕಟ್ಟಲು ಉಪಯೋಗಿಸಿದ್ದಾನೆ ಎಂದರೆ ಸರಿಯಲ್ಲ.

ಪ್ರಶಾಂತ ಲಾಡ್ಜ ಪರವಾನಿಗಿಗೆ ಮೊದಲು ಮೊದಲನೆ ಪ್ರತಿವಾದಿಯ ಹೆಸರಿನಲ್ಲಿ ತದ ನಂತರ 11 ನೇ ಪ್ರತಿವಾದಿಗೆಯ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನಾವು ಹಾಗೆ ಅನುಕೂಲಕ್ಕಾಗಿ ಮಾಡಿದ್ದೇವೆಂದು ನುಡಿದಿರುತ್ತಾರೆ. ಈ ದಾವೆಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾನು ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಶಾಂತ ಲಾಡ್ಜನ ಸಾಕಷ್ಟು ಜಾಗೆ ರಸ್ತೆ ಅಗಲಿಕರಣಕ್ಕೆ ಹೋಗಿದ್ದರಿಂದ ಅಲ್ಲಿ ಲಾಡ್ಜ ಮಾಡಲು ಜಾಗೆ ಇಲ್ಲ ಎಂದರೆ ಸರಿಯಲ್ಲ. 6 ತಿಂಗಳ ಹಿಂದೆ ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ 11 ನೇ ಪ್ರತಿತಿವಾದಿ ಶುಭಂ ರೆಡಿಮೆಡ ಅಂಗಡಿಯನ್ನು ತೆಗೆಗದಿದ್ದಾನೆ ಎಂದರೆ ಸಾಕ್ಷಿ ನಮಗೆ ಹೇಳಿಯೇ ಅದನ್ನು ಪ್ರಾರಂಭಿಸಿದ್ದಾನೆಂದು ನುಡಿದಿರುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ 11 ನೇ ಪ್ರತಿವಾದಿಗೆ 2 ವರೆ ಕೋಟಿ ಹಣ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ನಾವು ಒಟ್ಟು ಕುಟಂಬದ ಹಣವನ್ನು ಸಹ ಹಾಕಿದ್ದೇವೆಂದು ನುಡಿದಿರುತ್ತಾರೆ. 11 ನೇ ಪ್ರತಿವಾದಿ ಸದರಿ ವ್ಯವಹಾರವನ್ನು ತನ್ನ ಸ್ವಂತ ನಾತೆಯಿಂದ ಪ್ರಾರಂಭಿಸಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2008 ರಿಂದ 12 ರಿಂದ 14 ನೇ ಪ್ರತಿವಾದಗಳು ಮೇಲೆ ಹೇಳಿದ ವ್ಯವಹಾರ ಮಳಿಗೆಯ ನೆಲ ಮಹಡಿಯಲ್ಲಿ ಮೊಬೈಲ್ ಅಂಗಡಿಯನ್ನು ಪ್ರಾರಂಭಿಸಿದ್ದಾರೆ ಎಂದರೆ ಸಾಕ್ಷಿ ಅದು ಕೂಡಿಕೆಯ ವ್ಯವಹಾರ ಎಂದು ನುಡಿದಿರುತ್ತಾರೆ .

ಸದರಿ ವ್ಯವಹಾರ 12 ರಿಂದ 14 ನೇ ಪ್ರತಿವಾದಿಗಳು ಸ್ವಂತ ವ್ಯವಹಾರ ಎಂದರೆ ಸರಿಯಲ್ಲ. ಸದರಿ ವ್ಯವಾಹರವನ್ನು ಪ್ರಾರಂಭಿಸಲು 12 ರಿಂದ 14 ನೇ ಪ್ರತಿವಾದಿ ತಮ್ಮ ವೈಯಕ್ತಿಕ ನೆಲೆಯಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಮ ನಂ.5 ರಿಂದ 7 11 ನೇ ಪ್ರತಿವಾದಿಗೆ ಮಾತ್ರ ಸಂಬಂಧಿಸಿದ್ದು ಉಳಿದ ವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಹಕ್ಕು ಇರದೇ ಇದ್ದುದ್ದರಿಂದ ಸದರಿ ಆಸ್ತಿಗಳಲ್ಲಿ ನಾವು ಯಾವುದೇ ಹಣ ಹಾಕಿಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಬಂಡವಾಳನ್ನು ಹಾಕಿದ್ದೇವೆಂದು ನುಡಿದಿರುತ್ತಾರೆ. ಶುಭಂ ವ್ಯವಾಹರಕ್ಕೆ ಸಂಬಂಧಪಟ್ಟ ಪರವಾನಿಗೆ ಮತ್ತು ತೆರಿಗೆಯನ್ನು 11 ನೇ ಪ್ರತಿವಾದಿಗೆ ತನ್ನ ವೈಯಕ್ತಿಕ ನೆಲೆಯಲ್ಲಿ ತುಂಬುತ್ತಾನೆ ಎಂದರೆ ಸಾಕ್ಷಿ ಅದು ಲೆಕ್ಕ ಪತ್ರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನುಡಿದಿರುತ್ತಾರೆ. ಪ್ರತಿವಾದಿ ನಂ.11 ರಿಂದ 14 ತಮ್ಮ ಸ್ವಯಾರ್ಜಿತ ಆಸ್ತಿಯಿಂದ ದಾವಾ ಐಟಮ ನಂ.17 ನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.12 ಮತ್ತು 13 ತಮ್ಮ ತವರು ಮನೆಯ ಹಣದಿಂದ ದಾವಾ ಐಟಮ ನಂ.28 ನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾ ನಂ.11 ರಿಂದ 14 ದಾವಾ ಐಟಮ ನಂ.17 ರಲ್ಲಿ ಶುಭಂ ಗಾರ್ಡನ ಕಲ್ಯಾಣ ಮಂಟಪವನ್ನು ನಡೆಸುತ್ತಾರೆ ಎಂದರೆ ಸಾಕ್ಷಿ ನಾವು ಅದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆಂದು ನುಡಿದಿರುತ್ತಾರೆ. ಸದರಿ ವ್ಯವಾಹರವನು ಪ್ರಾರಂಭಿಸಲು 11 ನೇ ಪ್ರತಿವಾದಿ ತನ್ನ ವೈಯಕ್ತಿಕ ನೆಲೆಯಲ್ಲಿ ಪರವಾನಿಗೆ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನಾವು ಒಟ್ಟು ಕುಟುಂಬದಿಂದ ಅದಕ್ಕೆ ಸಹಾಯ ಮಾಡಿದ್ದೇವೆಂದು ನುಡಿದಿರುತ್ತಾರೆ. ನಾನು ಹಾಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 11 ನೇ ಪ್ರತಿವಾದಿ ಸದರಿ ಕಲ್ಯಾಣ ಮಂಟಪ ನಡೆಸಲು ಗೋಕಾಕ ಅರ್ಬನ ಕೋ ಆಫ ರೇಟಿವ ಬ್ಯಾಂಕದಿಂದ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ಅಬಿವೃದ್ದಿಗಾಗಿ ಪಡೆದಿದ್ದು ಎಂದು ನುಡಿದಿರುತ್ತಾರೆ. 11 ರಿಂದ 14 ನೇ ಪ್ರತಿವಾದಿಗಳು ಹೆಸರಿನಲ್ಲಿ ಆಸ್ತಿ ಮತ್ತು ವ್ಯವಹಾರಗಳಲ್ಲಿ ನನಗೆ ಮತ್ತು ಇನ್ನುಳಿದ ಸಹೋದರರಿಗೆ ಯಾವುದೇ ಹಕು ಇಲ್ಲ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿದ್ದ ಆಸ್ತಿಗಳು ಯಾವುದೂ ಏಕತ್ರ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಇನ್ನುಳಿದ ಪ್ರತಿವಾದಿಗಳು 11 ರಿಂದ 1 4 ನೇ ಪ್ರತಿವಾದಿಗಳಿಗೆ ಲುಕ್ಷಾನು ಮಾಡುವ ಉದ್ದೇಶದಿಂದ ಮತ್ತು ಅವರುಗಳು ಆಸ್ತಿ ಹೊಡೆಯುವ ಉದ್ದೇಶದಿಂದ ಸುಳ್ಳು ಸಾ್ಯೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11 ರಿಂದ 14 ನೇ ಪ್ರತಿವಾದಿಗಳು ಆಸ್ತಿಗಳಲ್ಲಿ ನಾನು ಮತ್ತು ವಾದಿ ಹಾಗೂ ಇನ್ನುಳಿದ ಪ್ರತಿವಾದಿಗಳು ಸಮಾಹಿಕ ಕಬ್ಜೆಯಲ್ಲಿ ಇಲ್ಲ ಎಂದರೆ ಸಾಕ್ಷಿ ಅವರಿಗೆ ವ್ಯವಹಾರಕ್ಕಾಗಿ ಮಾತ್ರ ಬಿಟ್ಟಿದ್ದು ಎಂದು ನುಡಿದಿರುತ್ತಾರೆ. ಪ್ರತಿವಾದಿ ನಂ.1, 11 ರಿಂದ 14 ಇವರ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಇರದೇ ಇದ್ದರೂ ನಾನು ಸುಳ್ಳು ದಾಖಲಾತಿಗಳ ಆದಾರದ ಮೇಲೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.2 ರಿಂದ 5 ರವರ ಪರ ವಕೀಲರ ಕೋರಿಕೆ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ